ವಿಷಯ: ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿನ ತಂಗಡಗಿ-ಮುದ್ದೇಬಿಹಾಳ ರಸ್ತೆ ಹಾಗೂ ಆಲಮಟ್ಟಿ-ನಾರಾಯಣಪು ರಸ್ತೆಗಳನ್ನು ದುರಸ್ತಿಗೊಳಿಸುವ ಬಗ್ಗೆ

(ಸದಸ್ಯರು ಗೈರು ಹಾಜರಿದ್ದರು)

ಅಧ್ಯಕ್ಷರು: ಈಗ ವಿತ್ತೀಯ ಕಲಾಪ.

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು): ನಾನು ಮಧ್ಯಾಹ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ ಮತ್ತು ನಾಳೆಯೂ ಮುಂದುವರೆಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ 1.36 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನ: ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

6. ವಿತ್ತೀಯ ಕಾರ್ಯಕಲಾಪಗಳು

2011-12ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು 2011-12ನೇ ಸಾಲಿನ ಮುಂಗಡ ಪತ್ರವನ್ನು ಸದನದಲ್ಲಿ ಮಂಡಿಸಿದ್ದಾರೆ.

ಅದರ ಚರ್ಚೆ ಪ್ರಾರಂಭ ಮಾಡಬೇಕು. ಬಜೆಟ್‌ನಂಥ ಬಹಳ ಪ್ರಮುಖವಾದ ವಿಷಯವನ್ನು ಚರ್ಚೆ ಮಾಡುವಾಗ, 4–5– ಮಂತ್ರಿಗಳು, ಮುಖ್ಯಮಂತ್ರಿಗಳು ಇದ್ದಾರೆ. ಅಂದರೆ, ಸರ್ಕಾರಕ್ಕೆ ಎಷ್ಟರಮಟ್ಟಿಗೆ ಮುಖ್ಯಮಂತ್ರಿಗಳ ಬಜೆಟ್ ಬಗ್ಗೆ ಆಸಕ್ತಿ ಇದೆ ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅಧಿಕಾರಿಗಳೂ ಕೂಡ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಲಿ, ಮುಖ್ಯ ಕಾರ್ಯದರ್ಶಿಗಳಾಗಲಿ, ಅವರ್ಯಾರೂ ಇಲ್ಲ, secretary is to the Governmen t ಇದು ಬರಿ Finance Secretary ಬಗ್ಗೆ ಮಾತನಾಡುವುದಿಲ್ಲ, ಬರಿ ಫೈನಾನ್ಸ್ ಬಗ್ಗೆ ಮಾತನಾಡುತ್ತಾರೆಯೇ? ಇಡೀ ರಾಜ್ಯದ ಆಯವ್ಯಯದ ಬಗ್ಗೆ ಚರ್ಚೆ ಮಾಡತಕ್ಕಂಥದ್ದು. ಆ ಚರ್ಚೆ ಮಾಡುವಾಗ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳು ಇರಬೇಕು.